**ಇಂದು ದಿಃ*18.01.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ.ಸಿ.ಕೆ.ಎಂ. ವಕೀಲರಿಂದಃ**

ಜೂನ್ 1998 ರಿಂದ ಮಿಳಿಂದ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಕೆಲಸಕ್ಕೆ ಸೇರಿದಾಗ ವ್ಯವಸ್ಥಾಪಕ ಧರ್ಮದರ್ಶಿ ಯಾರು ಇದ್ದರು ಗೊತ್ತಿಲ್ಲ. ನಾನು ಕೆಲಸಕ್ಕೆ ಸೇರುವಾಗ ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಅರ್ಜಿ ಕೊಟ್ಟಿಲ್ಲ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಪಿ.ಯು.ಸಿ. ಮಾಡಿದ್ದೇನೆ. ಅದರ ಜೊತೆ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಆಗಿದ್ದೇನೆ. ಶಾಲೆಯಲ್ಲಿ ಶಿಕ್ಷಕಿ ಆಗಲು ಟಿ.ಸಿ.ಹೆಚ್. ಮಾಡಬೇಕು ಎಂದರೆ ಸರಿ. ಸಾಕ್ಷಿಗೆ ಒಂದು ಅರ್ಜಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ಅರ್ಜಿಯನ್ನು ನೋಡಿ ಅದನ್ನು ತಾನು 2003 ರಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಕೊಟ್ಟಿರುವ ಅರ್ಜಿ ಎಂದು ಒಪ್ಪಿರುವ ಕಾರಣ ಸದರಿ ದಾಖಲೆಯನ್ನು **ನಿ.ಡಿ.27** ಎಂದು ಗುರುತಿಸಲಾಯಿತು. ನನ್ನ ಬಳಿ ನೇಮಕಾತಿ ಪತ್ರ ಇಲ್ಲ. ಜೂನ್ 1998 ರಿಂದ ಶಾಲಾ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ.

ಆರೋಪಿಗೆ ನಾನು ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಅರ್ಜಿ ಕೊಟ್ಟಿಲ್ಲ. ಜೂನ್ 1998 ರಿಂದ ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆ ಇದೆ ಸಾಕ್ಷಿ ಹಾಜರಾತಿ ಪುಸ್ತಕ ಇದೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ನಾನು ಸಹ ಶಿಕ್ಷಕಿ ಎಂದು ನಮೂದು ಇರುತ್ತದೆ. ಮಿಳಿಂದ ಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿಗಳು ಗೋವಿಂದಯ್ಯ ಎಂದರೆ ಸರಿ. ನಿ.ಡಿ.27 ರಲ್ಲಿ ಅರ್ಜಿಯನ್ನು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ address ಮಾಡಿದೆ ಎಂದರೆ ಸರಿ. ಆರೋಪಿ ಯಾವ ಕಾಲಕ್ಕೂ ವ್ಯವಸ್ಥಾಪಕ ಧರ್ಮದರ್ಶಿಯಾಗಿ ಕೆಲಸ ಮಾಡಿಲ್ಲ ಎಂದರೆ ಸರಿ. ವ್ಯವಸ್ಥಾಪಕ ಧರ್ಮದರ್ಶಿಗೆ ಸಂಸ್ಥೆಯ ಆಡಳಿತದ ಮೇಲೆ ಹಿಡಿತ ಇರುತ್ತದೆ ಎಂದರೆ ಸರಿ. ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ಸಿಬ್ಬಂದಿಯವರಿಗೆ ಸಂಬಳ ಕೊಡುವುದು, ಶಿಸ್ತು ಕ್ರಮ ಜರುಗಿಸುವುದು ಮತ್ತು ಇತರೇ ಎಲ್ಲಾ ಅಧಿಕಾರ ಇರುತ್ತದೆ ಎಂದರೆ ಸರಿ. ಇವತ್ತಿನವರೆಗೂ ಸಂಸ್ಥೆ ವ್ಯವಸ್ಥಾಪಕ

ಧರ್ಮದರ್ಶಿಗಳಾದ ಗೋವಿಂದಯ್ಯ ರವರ ನಿರ್ದೇಶನದಂತೆ ನಡೆಯುತ್ತಿದ್ದೇ ಎಂದರೆ ಸರಿ. ಆರೋಪಿಗೆ ಹಣ ಕೊಡುತ್ತಿದ್ದ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿ ನನ್ನ ಬಳಿ ದಾಖಲೆ ಇಲ್ಲ ಎನ್ನುತ್ತಾರೆ. ಗೋವಿಂದಯ್ಯ ರವರ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೊಡಬೇಕು ಎಂದು ಯಾರು ನಿರ್ದೇಶನ ಕೊಟ್ಟಿದ್ದರು ಎಂದರೆ ಸಾಕ್ಷಿ ಆರೋಪಿಯೇ ಕೊಟ್ಟಿದ್ದರು ಎನ್ನುತ್ತಾರೆ. ಅದರ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು 2006 ನೇ ಸಾಲಿನಿಂದ ಶಾಲಾ ಶುಲ್ಕವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿದ್ದೆ. ಆ ರೀತಿ ಹಣ ಜಮಾ ಮಾಡಲು ವ್ಯವಸ್ಥಾಪಕ ಧರ್ಮದರ್ಶಿಗಳು ನನಗೆ ನಿರ್ದೇಶನ ನೀಡಿದರು. ವಾಹನದ ಶುಲ್ಕ ವಸೂಲಿ ಮಾಡಲು ಸುಲೋಚನ ರವರಿಗೆ ಆರೋಪಿ ಅನುಮತಿ ಕೊಟ್ಟಿದ್ದರು. ಅದರ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಸದರಿ ದಾಖಲೆ ಸುಲೋಚನ ರವರ ಹತ್ತಿರ ಇದೆಯೋ ಇಲ್ಲವೋ ಗೊತ್ತಿಲ್ಲ. ದಿನಾಂಕಃ 09-12-2009 ರಲ್ಲಿ ನಡೆದ ಸಭೆಯಲ್ಲಿ ನನಗೆ ಸಂಸ್ಥೆಯ ಪೂರ್ತಿ ಲೆಕ್ಕ ಪತ್ರ ನೋಡಿಕೊಳ್ಳುವ ಜವಾಬ್ದಾರಿ ಕೊಟ್ಟಿದ್ದಾರೆ. ನಂತರದಲ್ಲಿ ನಾನು ಸಂಸ್ಥೆಯ ಪೂರ್ಣ ಲೆಕ್ಕ ಪತ್ರ ಪರಿಶೀಲನೆ ಮಾಡಿದ್ದೇನೆ. ನಾನು ಲೆಕ್ಕ ಪತ್ರ ಪರಿಶೀಲನೆಯನ್ನು 2009 ನೇ ಸಾಲಿನಿಂದ ಮಾಡಿದ್ದೇನೆ. ಅದರ ಪೂರ್ವದ್ದು ಮಾಡಿಲ್ಲ. ಅದರ ಪೂರ್ವದ ಲೆಕ್ಕ ಪತ್ರಗಳು ನನ್ನ ಸುರ್ಪದಿನಲ್ಲಿ ಇರಲಿಲ್ಲ. 2009 ರ ನಂತರದಲ್ಲಿ ನಾನು ಲೆಕ್ಕ ಪರಿಶೀಲನೆ ಮಾಡಿದಾಗ ಆರೋಪಿ ಹಣ ದುರುಪಯೋಗ ಮಾಡಿಕೊಂಡಿರುವುದು ಕಂಡು ಬಂದಿಲ್ಲ. 2009 ರ ಪೂರ್ವದ ಲೆಕ್ಕ ಪತ್ರಗಳು ಯಾರ ಸುರ್ಪದಿನಲ್ಲಿ ಇದ್ದವು ಗೊತ್ತಿಲ್ಲ. ನಾನು ನೋಡಿರುವ ಲೆಕ್ಕ ಪತ್ರಗಳಲ್ಲಿ ಆರೋಪಿ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆಗಿನ ದಾಖಲೆ ನೋಡಿಲ್ಲ. ಖರ್ಚು ವೆಚ್ಚಗಳ ಪ್ರಸ್ತಾವನೆಯನ್ನು ಆರೋಪಿಗೆ ಸಲ್ಲಿಸುವಂತೆ ನನಗೆ ವ್ಯವಸ್ಥಾಪಕ ಧರ್ಮದರ್ಶಿಗಳು ಮತ್ತು ಲೆಕ್ಕ ಪರಿಶೋಧಕರು ನಿರ್ದೇಶನ ಮಾಡಿದ್ದರು. ಅದರ ಬಗ್ಗೆ ದಾಖಲೆ ನನ್ನ ಬಳಿ ಇದೆ. ಸದರಿ ದಾಖಲೆಗೆ ವ್ಯವಸ್ಥಾಪಕ ಧರ್ಮದರ್ಶಿಗಳು ಸಹಿ ಮಾಡಿದ್ದಾರೆ. ಲೆಕ್ಕ ಪರಿಶೋಧಕರು ಅದಕ್ಕೆ ಸಹಿ ಮಾಡಿದ್ದಾರೋ ಇಲ್ಲವೋ ನೆನಪಿಲ್ಲ. 2009 ರಿಂದ 2010 ರವರೆಗೆ

ಖರ್ಚು ವೆಚ್ಚಗಳ ಪ್ರಸ್ತಾವನೆಯನ್ನು ಆರೋಪಿಗೆ ಕೊಟ್ಟಿದ್ದೇನೆ. ಆದರೆ ಎಷ್ಟು ಪ್ರಸ್ತಾವನೆಗಳನ್ನು ಕೊಟ್ಟಿದ್ದೇನೆ ನೆನಪಿಲ್ಲ. ನಾನು ಕೊಟ್ಟ ಪ್ರಸ್ತಾವನೆಗಳಲ್ಲಿ ಎಷ್ಟು ಹಣದ ಬಗ್ಗೆ ಇತ್ತು ನೆನಪಿಲ್ಲ. 2009 ರಿಂದ ನಂತರದಲ್ಲಿ ಎಲ್ಲಾ ಹಣದ ವ್ಯವಹಾರ ಚೆಕ್ ರೂಪದಲ್ಲಿ ಆಗಿರುತ್ತದೆ. ಆರೋಪಿ ನನಗೆ ನಿಂದನೆ ಮಾಡಿದ್ದ ಬಗ್ಗೆ ಪೋಲಿಸರಿಗೆ ದೂರು ಕೊಟ್ಟಿಲ್ಲ ಆದರೆ ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ದೂರು ಕೊಟ್ಟಿದ್ದೇನೆ. ಪೋಲಿಸರಿಗೆ ದೂರು ಕೊಡಲು ತೊಂದರೆ ಇರಲಿಲ್ಲ. ದೈಹಿಕ ಶಿಕ್ಷಕರು ಆರೋಪಿ ಮೇಲೆ ದೂರು ಕೊಟ್ಟ ಬಗ್ಗೆ ದಾಖಲೆ ಇದೆ. ಅವರು ಠಾಣೆಯಲ್ಲಿ ದೂರು ಕೊಟ್ಟಿಲ್ಲ. ಹೇಮಾವತಿ ರವರು ಆರೋಪಿಗೆ ದುಡ್ಡು ಕೊಟ್ಟ ಬಗ್ಗೆ ದಾಖಲೆ ನೋಡಿದ್ದೇನೆ. ಸದರಿ ದಾಖಲೆ ಅಂದರೆ ಹೇಮಾವತಿ ಮತ್ತು ಜಲಜಾಕ್ಷಿ ರವರು ರಿಜಿಸ್ಟರ್ ನಲ್ಲಿ ಬರೆದಿರುವುದನ್ನು ನೋಡಿದ್ದೇನೆ. ಅದಕ್ಕೆ ಆರೋಪಿ ಸಹಿ ಮಾಡಿದ್ದಾರೆ. ಅವರು ಆರೋಪಿ ಎಷ್ಟು ಹಣ ಕೊಟ್ಟಿದ್ದಾರೆ ಗೊತ್ತಿಲ್ಲ. ಆರೋಪಿ ಹಣ ದುರುಪಯೋಗ ಮಾಡಿಕೊಂಡಿದ್ದಾರೋ ಇಲವೋ ನನಗೆ ಗೊತ್ತಿಲ್ಲ. ಶಿಕ್ಷಕಿ ಗೀತಿ ರವರ ಕಡೆಯಿಂದ ಆರೋಪಿ ಹಣ ಪಡೆದ ಬಗ್ಗೆ ದಾಖಲೆ ನೋಡಿದ್ದೇನೆ. ಅದು ಎಷ್ಟು ಹಣ ಹೇಳಲು ಆಗುವುದಿಲ್ಲ. 2010 ನೇ ಸಾಲಿನಲ್ಲಿ ಚೆನ್ನಯ್ಯ ರವರು ನಮಗೆ ನಿಂದನೆ ಮಾಡಿದ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ. ಆರೋಪಿ ಮನೆಯಲ್ಲಿ ಇದ್ದ ಶಾಲೆಯ ಪಾತ್ರೆಗಳನ್ನು ತರಲು ಹೋದಾಗ ಅವರು ಶಿಕ್ಷಕರಿಗೆ ನಿಂದಿಸಿದ್ದ ಬಗ್ಗೆ ಪೋಲಿಸರಿಗೆ ದೂರು ಕೊಟ್ಟಿಲ್ಲ. ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶಾಲೆಗೆ ಬಂದಿದ್ದಾಗ ಆರೋಪಿಯ ಮಾವ ಚೆನ್ನಯ್ಯ ಶಿಕ್ಷಕರಿಗೆ ನಿಂದಿಸಿದ್ದ ಬಗ್ಗೆ ಪೋಲಿಸರಿಗೆ ದೂರು ಕೊಟ್ಟಿಲ್ಲ. ವ್ಯವಸ್ಥಾಪಕ ಧರ್ಮದರ್ಶಿಗಳ ನಿರ್ದೇಶನಗಳನ್ನು ಪಾಲಿಸದೇ ಇದ್ದರೆ ಅವರು ಶಿಸ್ತಿನ ಕ್ರಮ ಜರುಗಿಸುತ್ತಾರೆ ಎಂದರೆ ಸರಿ. ನನಗೆ ವ್ಯವಸ್ಥಾಪಕ ಧರ್ಮದರ್ಶಿಗಳು ಆರೋಪಿ ಸಂಸ್ಥೆಯ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳಲು ನಿರ್ದೇಶನ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅವರು ನನ್ನ ಮೇಲೆ ಶಿಸ್ತಿನ ಕ್ರಮ ಜರುಗಿಸುತ್ತಾರೆ ಎಂದು ಹೆದರಿ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಆತನ

ಮನೆಯವರು ನಮಗೆ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಂದನೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಸಹಾ ಗೋವಿಂದಯ್ಯ ರವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**